ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಹಿಂದುತ್ವದ ಒಳಜಗತ್ತು

ಜನಪ್ರಿಯ ಮಾಧ್ಯಮಗಳನ್ನು ಬಲಪಂಥೀಯ ವಿಚಾರಧಾರೆ ಆಕ್ರಮಿಸಿಕೊಂಡು, ಆ ವಿಚಾರಧಾರೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವಲ್ಲಿ ಯಶಸ್ವಿ ಪ್ರಯತ್ನಗಳು ನಡೆಯುತ್ತಿವೆ ಎನ್ನುವುದನ್ನು ಪುರೋಹಿತ್ ತಮ್ಮ ಪುಸ್ತಕದ ಮೂಲಕ ನಿರೂಪಿಸುತ್ತಾರೆ.

ಹಾಡು, ಕವಿತೆ, ಬರವಣಿಗೆ – ಸಾಂಸ್ಕೃತಿಕ ಕಾರ್ಯಕ್ರಮಗಳು ಒಂದು ವಿಚಾರಧಾರೆಯನ್ನು ಹೇಗೆ ರೂಪಿಸಬಹುದು? ಸಾಹಿತ್ಯ-ಸಂಗೀತದಿಂದ ವಿಚಾರಧಾರೆಗೆ ಪೂರಕವಾದ ಅಸ್ತ್ರಗಳು ಸಿಗುತ್ತವೆಯೇ? ಹೀಗೆ ವಿಚಾರಧಾರೆಯನ್ನು ನಂಬಿ ನಡೆಯುವವರು ಒಂದು ಸಂಸ್ಥಾಗತ ಚೌಕಟ್ಟಿನಲ್ಲಿರುತ್ತಾರೋ ಅಥವಾ ವೈಯಕ್ತಿಕವಾಗಿ ತಾವೇ ತಮ್ಮ ನಂಬಿಕೆಗಳನ್ನು ಪ್ರಸಾರ ಮಾಡುತ್ತಾ ಮುಂದುವರೆಯುತ್ತಾರೋ? ಅವರು ವಿಚಾರಧಾರೆಯಿಂದ- ಅದರ ಪ್ರಸರಣದಿಂದ- ಅಧಿಕಾರ, ಹುದ್ದೆಗಳನ್ನು ಆಶಿಸುತ್ತಾರೋ? ಹೀಗೆ ಒಂದು ವಿಚಾರಧಾರೆಯನ್ನು ಪಸರಿಸುತ್ತಾ ಸಾಂಸ್ಕೃತಿಕ ಜಗತ್ತಿನಲ್ಲಿ ಪಯಣಿಸುವಾಗ ಭ್ರಮನಿರಸನವಾಗುವುದು ಸಾಧ್ಯವೇ? ಈ ರೀತಿಯ ಪ್ರಶ್ನೆಗಳನ್ನು ಬಿಡಿಸಿ ನೋಡಲು ಕುಣಾಲ್ ಪುರೋಹಿತ್ ಅವರ ಪುಸ್ತಕ 'ಎಚ್-ಪಾಪ್' ಪ್ರಯತ್ನಿಸುತ್ತದೆ.

ಎಡಪಂಥೀಯ ಚಳವಳಿಯಲ್ಲಿ ಮತ್ತು ದಲಿತ ಚಳವಳಿಗಳಲ್ಲಿ ನಾವು ಹಾಡು, ನಾಟಕ, ಪತ್ರಿಕೆ, ಪ್ರಕಟಣೆಗಳು ವಹಿಸಿರುವ ಪ್ರಮುಖ ಪಾತ್ರವನ್ನು ನೋಡಿದ್ದೇವೆ. ಅದು ಒಂದು ರೀತಿಯಲ್ಲಿ ಸಂಘಟಿತವಾಗಿಯೂ – ಒಂದು ನಿರ್ದಿಷ್ಟ ಗುಂಪು, ಮತ್ತು ತಂಡಗಳ ಮೂಲಕ ರೂಪುಗೊಂಡಿವೆ. ಮಹಾರಾಷ್ಟ್ರದ 'ಕಬೀರ್ ಕಲಾ ಮಂಚ್', ಆಂಧ್ರಪ್ರದೇಶ-ತೆಲಂಗಾಣಾದ 'ಜನನಾಟ್ಯಮಂಡಲಿ', ಕರ್ನಾಟಕದಲ್ಲಿ ಒಂದು ಕಾಲಕ್ಕೆ ಎಡಪಂಥೀಯ ವಿಚಾರಧಾರೆಯನ್ನು ಹೊತ್ತು ನಾಟಕ ಪ್ರಪಂಚದಲ್ಲಿ ಪ್ರಮುಖ ಸ್ಥಾನದಲ್ಲಿದ್ದ 'ಸಮುದಾಯ', ಹೀಗೆ ನಮಗೆ ಅನೇಕ ಉದಾಹರಣೆಗಳು ಕಾಣಿಸುತ್ತವೆ. ಆದರೆ ಬಲಪಂಥೀಯ ಅದರಲ್ಲೂ ಹಿಂದುತ್ವದ ವಿಚಾರಧಾರೆಯಲ್ಲಿ ಈ ಪೂರಕ ಪರಿಕರಾತ್ಮಕ ಕಲಾಮಾಧ್ಯಮಗಳು ಸೂಕ್ಷ್ಮವಾಗಿ ಕೆಲಸ ಮಾಡಲಿಲ್ಲವೇನೋ. ಬಹುಶಃ ವಿಚಾರವಾದಕ್ಕೂ, ನಂಬಿಕೆಗೂ ಇರುವ ಮೂಲಭೂತ ವ್ಯತ್ಯಾಸದಿಂದಾಗಿ ಹೀಗಾಗಿರಬಹುದು. ವಿಚಾರವಾದವನ್ನು ಹಿಡಿದಾಗ, ವಿಚಾರಧಾರೆಗಳಲ್ಲಿ ಅನೇಕ ವಾದವಿವಾದಗಳಿರುತ್ತವೆ. ಆ ವಾದವಿವಾದಗಳು ಸೂಕ್ಷ್ಮವಾಗಿ, ಅಂತರ್ ವಿರೋಧಗಳಿಂದ ಕೂಡಿರುತ್ತವೆ. ಹೀಗಾಗಿಯೇ ಎಡಪಂಥೀಯರಲ್ಲಿರುವ ಅತಿ ಬೌದ್ಧಿಕತೆಯಿಂದಾಗಿ ಪಕ್ಷಗಳು ತುಂಡಾಗುತ್ತಾ ಹೋಗುವುದನ್ನು ನಾವು ಕಂಡಿದ್ದೇವೆ. ಕಮ್ಯುನಿಸ್ಟ್ ಪಕ್ಷ, ಮಾರ್ಕಿಸ್ಟ್, ಮಾರ್ಕ್ಸಿಸ್ಟ್ ಲೆನಿನಿಸ್ಟ್, ಮೋವೋಯಿಸ್ಟ್... ಹೀಗೆ ಪಕ್ಷಗಳು